ಪ್ರಯೋಗ ಮಾಡಬೇಕಾಗುತ್ತದೆ. ಈಗಾಗಲೇ ೬ ಮಂಗಗಳ ಮೇಲೆ ಪ್ರಯೋಗ ಮಾಡಿದ್ದಾರೆ, ಇನ್ನೂ ನಾಲ್ಕರ ಮೇಲೆ ಪ್ರಯೋಗ ಮಾಡಬೇಕಾಗಿದೆ ಎಂದು ಡ್ರಗ್ ಕಂಟ್ರೋಲರ್ ಅವರು ಹೇಳಿದ್ದಾರೆ. ಜನರ ಮೇಲೆ ಪ್ರಯೋಗ ಮಾಡುವುದಕ್ಕೆ ಮೊದಲು ಮಂಗಗಳ ಮೇಲೆ ಪ್ರಯೋಗ ಮಾಡಲು ಮಂಗಗಳನ್ನು ಹಿಡಿಯಲು ಅನುಮತಿ ಕೊಡಬೇಕೆಂದು ಅರಣ್ಯ ಇಲಾಖೆಯವರನ್ನು ಕೇಳಿದ್ದೇವೆ. ಆದರೆ ಬೆಂಗಳೂರಿನಿಂದ ಮಂಗಗಳನ್ನು ಒದಗಿಸುತ್ತೇವೆಂದು ಅಧಿಕಾರಿಗಳು ಹೇಳಿದರೂ ಸಹ ಪೂನದಲ್ಲಿರುವ ವಿಜ್ಞಾನಿಗಳು ಎಲ್ಲಿ ಖಾಯಿಲೆ ಇದೆ ಅಲ್ಲಿ ಮಂಗಗಳನ್ನು ಹಿಡಿದು ಪ್ರಯೋಗ ಮಾಡಬೇಕೆಂದು ಹೇಳಿದ್ದರಿಂದ ಇದು ತಡವಾಯಿತೇ ಹೊರತು ಲಸಿಕೆಯನ್ನು ತಯಾರು ಮಾಡುವುದರಲ್ಲಿ ನಮ್ಮ ವಿಜ್ಞಾನಿಗಳು ಖಂಡಿತವಾಗಿಯೂ ವಿಫಲರಾಗಿಲ್ಲ. ಮಾನ್ಯ ಸದಸ್ಯರು ವೈದ್ಯಾಧಿಕಾರಿಗಳು ಬೇಕೆಂದು ಸುತ್ತಿ ಬಳಸಿ ಪ್ರಶ್ನೆ ಕೇಳಿದ್ದಾರೆ. ಮುಖ್ಯವಾಗಿ ಅವರಿಗೆ ಬೇಕಾಗಿರುವುದು ವೈದ್ಯರುಗಳು. ಲಸಿಕೆ ಬಗ್ಗೆ ಅವರ ತಲೆ ಬಿಸಿ ಇಲ್ಲ. ನಾನು ಕೂಡ ಅವರ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವುದರಿಂದ, ಈ ಸಲದ ಪರ್ಯಾವಣೆಯಲ್ಲಿ ಕೆಲವರು ಆ ಸ್ಥಳ ಬೇಕು ಈ ಸ್ಥಳ ಬೇಕೆಂದು ಕೇಳಿಕೊಂಡರು. ಇದರಿಂದ ಇದ್ದ ಜಾಗದಲ್ಲೂ ವೈದ್ಯರು ಇಲ್ಲದಂಥ ಪರಿಸ್ಥಿತಿ ಉಂಟಾಗಿದೆ. ನಮ್ಮ ಹೊಸ ರಿಕ್ರೂಟ್‌ಮೆಂಟ್‌ನಲ್ಲಿ ಖಂಡಿತವಾಗಿ ಆದಷ್ಟು ಜಾಗ್ರತೆ ವೈದ್ಯಾಧಿಕಾರಿಗಳನ್ನು ಅಪಾಯಿಂಟ್ ಮಾಡುತ್ತೇನೆಂದು ಹೇಳುತ್ತೇನೆ.

೧೨-೦೦ ಬಿ. ಎಂ,

ಶ್ರೀ ಆರ್. ಎನ್. ನಾಯಕ್.—ನಾನು ಇಂಥ ಸ್ಥಳಗಳಿಗೇ ವೈದ್ಯಾಧಿಕಾರಿಗಳನ್ನು ಹಾಕಿ ಎಂದು ಒತ್ತಾಯ ಮಾಡಿಲ್ಲ. ಆದರೆ ನಾನು ಹೇಳಿದ ನಾಲ್ಕು ಕಡೆಗಳಿಗೆ ವೈದ್ಯಾಧಿಕಾರಿಗಳನ್ನು ಹಾಕಲೇಬೇಕಾಗುತ್ತದೆ. ಯಾವುದೇ ವೈದ್ಯಾಧಿಕಾರಿಗಳನ್ನು ವರ್ಗ ಮಾಡಿ ಎಂದು ನಾನು ಒತ್ತಾಯ ಮಾಡಿಲ್ಲ, ನಾಲ್ಕು ಕಡೆಗೆ ಕೊಡಿ ಎಲ್ಲಾದು ಮಾತ್ರ ಪತ್ರ ಬರೆದಿದ್ದೆ. ಒತ್ತಡ ತರದ ಶಾಸಕರಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ವೈದ್ಯಾಧಿಕಾರಿಗಳನ್ನು ಹಾಕಲೇಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟ ಆಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಲಸಿಕೆಯನ್ನು ಕರ್ನಾಟಕ ರಾಜ್ಯದಲ್ಲಿ ತಯಾರಿಸಲು ಶಿವಮೊಗ್ಗದಲ್ಲಿರುವ ವಿ.ಡಿ.ಎಲ್. ಸಂಸ್ಥೆಯಲ್ಲಿ ಪ್ರಯತ್ನಿಸಲಾಗಿದೆ ಎಂದು ಹೇಳುತ್ತಾರೆ, ಪೂನಾದಲ್ಲಿರುವ ವ್ಯಾಕ್ಸಿನ್ ಇನ್‌ಸ್ಟಿಟ್ಯೂಟಿನಿಂದ ಲಸಿಕೆಗಳನ್ನು ತರಿಸಿ ಪ್ರಯೋಗ ಮಾಡಲಿಕ್ಕೆ ಬೇಕಾಗಿರತಕ್ಕ ಗಿನಿಪಿಗ್ಸ್ ಇಲ್ಲ ಎಂಬುದು ನನ್ನ ಗಮನಕ್ಕೆ ಬಂದಿದೆ. ಇದು ನಿಜವೇ ? ೧೯೫೭ನೇ ಇಸವಿಯಿಂದ ಈ ಕಾಯಿಲೆ ಕರ್ನಾಟಕ ರಾಜ್ಯದಲ್ಲಿ ಇದೆ. ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಇದು ಇದೆ. ಹಿಂದಿನ ಸಾರಿ ಈ ಪ್ರಶ್ನೆ ಬಂದಾಗ ಈ ಖಾಯಿಲೆ ಗುಣಪಡಿಸುವುದು ಸಾಧ್ಯವೇ ಹೊರತು ತಡೆಗಟ್ಟುವುದು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಈ ಕಾರಣಕ್ಕಾಗಿ ನಾಯಕ್ ಅವರು ಹೇಳಿದಹಾಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಈ ಖಾಯಿಲೆ ತಗುಲಿರತಕ್ಕ ಕುಟುಂಬಗಳಿಗೆ ಪರಿಹಾರ ಕೊಡತಕ್ಕ ಬಗ್ಗೆ ಆಲೋಚನೆ ಮಾಡುತ್ತೀರಾ ? ಆಲೋಚನೆ ಏನಾದರೂ ಆಗಿದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್.— ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಕೊಡುತ್ತೇವೆಂದು ಹೇಳಿದ್ದು ನಿಜ. ಅವರು ಮನವಿಯನ್ನು ಮಾಡಿದರೆ ಆ ನಿಧಿಯಿಂದ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಪುಣೆಯಿಂದ ಲಸಿಕೆ ಉಪಯೋಗಿಸಲು ಗಿನಿಪಿಗ್ಸ್ ಸಿಗುತ್ತಿಲ್ಲ ಎಂದು ಹೇಳಿದರು. ಅದು ನನ್ನ ಗಮನಕ್ಕೆ ಬಂದಿಲ್ಲ. ನಾನು ಅದನ್ನು ವಿಚಾರಿಸಿ ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಶಿವಮೊಗ್ಗ ಇನ್‌ಸ್ಟಿಟ್ಯೂಟಿನಿಂದ ಇನ್‌ಫರ್ಮೇಷನ್ ಬಂದಿದೆ.

ಶ್ರೀಮತಿ ಮನೋರಮ ಮಧ್ವರಾಜ್.—ಅಧಿಕಾರಿಗಳು ಕೊಟ್ಟ ವರದಿ ಪ್ರಕಾರ ಮಂಗಗಳ ಮೇಲೆ ಪ್ರಯೋಗ ಮಾಡುವುದು ಎಂದಿದೆ.

ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮೇಲ್ದರ್ಜೆಗೆ ಏರಿಸುವುದು

(೫೭೨) ಶ್ರೀ ಜೆ. ರಾಜುಗೌಡ (ಹನೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲಾಗಿದೆ ?

೨. ಇವುಗಳ ಪರಿವರ್ತನೆ ಆದ ನಂತರ ವೈದ್ಯಕೀಯ ವೃಷ್ಟಿಯಲ್ಲಿ ರೋಗಿಗಳಿಗೆ ಆಗಿರುವ ಪ್ರಯೋಜನವೇನು ?

೩. ಎಷ್ಟೆಷ್ಟು ಜನಸಂಖ್ಯೆಗೆ ಒಂದೊಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯಲಾಗಿದೆ ?

೪. ರಾಜ್ಯದ ಆಸ್ಪತ್ರೆಗಳಲ್ಲಿರುವ ಹಾಸಿಗೆಗೂ ಜನಸಂಖ್ಯೆಗೂ ಇರುವ ಪ್ರಮಾಣವೆಷ್ಟು ?

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)—

೧. ೬೩೦ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮೇಲ್ದರ್ಜೆಗೇರಿಸಲಾಗಿದೆ.

೨. ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಪರಿವರ್ತನೆಯಾದ ನಂತರ ಹೆಚ್ಚುವರಿ ಕಟ್ಟಡ, ಸಿಬ್ಬಂದಿ, ಔಷಧ, ೬ ಹಾಸಿಗೆ ಪ್ರಯೋಗಾಲಯ ಮತ್ತು ವಾಹನ ಸೌಲಭ್ಯಗಳನ್ನು ರೋಗಿಗಳಿಗೆ ಒದಗಿಸಲಾಗುವುದು.

೩. ಸರ್ಕಾರಿ ಆದೇಶ ಸಂಖ್ಯೆ ಆಕಾಕ ೩೪೯ ಸಿಜಿಎಸ್ ೮೬ ದಿನಾಂಕ ೧೧-೫-೧೯೮೭ರ ಮೇರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಯಲು ಸೀಮೆಯಲ್ಲಿ ಪ್ರತಿ ೫೦,೦೦೦ ಜನಸಂಖ್ಯೆಗೊಂದರಂತೆ ಹಾಗೂ ಆದಿವಾಸಿ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ಪ್ರತಿ ೨೦,೦೦೦ ಜನಸಂಖ್ಯೆಗೊಂದರಂತೆ ಸ್ಥಾಪಿಸಲಾಗುತ್ತಿದೆ.

೪. ೧:೧೪೯೬

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೆ ೬೩೦ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದು ಹೇಳಿದ್ದಾರೆ. ೧೯೮೮-೮೯ರಲ್ಲಿ ಮತ್ತು ೧೯೮೯-೯೦ರಲ್ಲಿ ಎಷ್ಟು ಘಟಕಗಳನ್ನು ಮೇಲ್ದರ್ಜೆಗೇರಿಸಿದ್ದಾರೆ? ಈ ಕೇಂದ್ರಗಳಿಗೆ ಅನೇಕ ಸೌಲಭ್ಯಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಯಾವ ಜಿಲ್ಲೆಯ ಯಾವ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೆಚ್ಚುವರಿ ಸೌಲಭ್ಯಗಳನ್ನು ಕೊಟ್ಟಿದ್ದಾರೆ ? ನನಗೆ ತಿಳಿದಹಾಗೆ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ನಡೆಸುತ್ತಿದ್ದ ಆಸ್ಪತ್ರೆಗಳನ್ನು ಸರ್ಕಾರ ತೆಗೆದುಕೊಂಡು ಹತ್ತಾರು ವರ್ಷಗಳಾದರೂ ಸಹ ಅಲ್ಲಿಗೆ ಒಬ್ಬ ಎಂ. ಬಿ. ಬಿ.ಎಸ್. ಡಾಕ್ಟರನ್ನು ಹಾಕಿಲ್ಲ. ಆಗಿರುವ ಒಂದೇ ಬದಲಾವಣೆ ಅಂದರೆ ಬೋರ್ಡ್ ಬದಲಾಯಿಸಿ ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರ ಎಂದು ಮಾಡಿದ್ದೀರಿ. ಕೇಂದ್ರ ಸರ್ಕಾರದಿಂದ ಗ್ರಾಂಟ್ ಪಡೆಯುವ ಉದ್ದೇಶದಿಂದ ಈ ರೀತಿ ಮಾಡಿದ್ದೀರಿ. ಆದರೆ ಯಾವುದೇ ಸೌಲಭ್ಯ ಕೊಟ್ಟಿಲ್ಲ. ದಯವಿಟ್ಟು ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಿ.

ಶ್ರೀಮತಿ ಮನೋರಮ ಮಧ್ವರಾಜ್ — ಮಾನ್ಯ ಸದಸ್ಯರು ಹೇಳಿದಂಥ ವಿಚಾರಗಳಲ್ಲಿ ಸತ್ಯಾಂಶ ಇದ್ದರೆ ತನಿಖೆ ಮಾಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

(ಶ್ರೀ ರಾಜೂಗೌಡ ಮತ್ತೆ ಪ್ರಶ್ನೆ ಕೇಳಲು ಎದ್ದು ನಿಂತರು.)

ಅಧ್ಯಕ್ಷರು — ಸತ್ಯಾಂಶ ಇದ್ದರೆ ತನಿಖೆ ಮಾಡಿಸುತ್ತಾರೆ ಬಿಡಿ.

ಶ್ರೀ ಜಿ. ರಾಜೂಗೌಡ.—ರಾಜ್ಯದ ಆಸ್ಪತ್ರೆಗಳಲ್ಲಿರುವ ಹಾಸಿಗೆಗೂ ಜನಸಂಖ್ಯೆಗೂ ಇರುವ ಪ್ರಮಾಣವೆಷ್ಟು ಎಂದು ಕೇಳಿರುವುದಕ್ಕೆ ಉತ್ತರ ಕೊಟ್ಟಿದ್ದಾರೆ. ೧೯೮೧ನೇ ಜನಗಣತಿ ಆಧಾರದ ಮೇಲೆ ೧:೧೪೯೬ ಎಂದು ಹೇಳಿದ್ದಾರೆ. ನಮ್ಮ ನೆರೆರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ತಮಿಳು ನಾಡಿನಲ್ಲಿ ಯಾವ ರೀತಿ ಪ್ರಮಾಣ ಇದೆ ಆ ತರಹ ಇಲ್ಲೂ ವ್ಯವಸ್ಥೆ ಮಾಡುತ್ತೀರಾ ?

ಅಧ್ಯಕ್ಷರು.—ಮಾನ್ಯ ಆರೋಗ್ಯ ಸಚಿವರು ರಾಜೂಗೌಡರ ಪ್ರಶ್ನೆಗೆ ಉತ್ತರ ಹೇಳಲಿ. ಆಮೇಲೆ ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಸದಸ್ಯರು ಜಟಿಲವಾದ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಉತ್ತರ ಕೊಡಲು ಕಾಲಾವಕಾಶ ಬೇಕು.

ಅಧ್ಯಕ್ಷರು.—ರಾಜೂಗೌಡರೆ ನೀವು ನೋಟೀಸ್ ಕೊಡಿ. ಈಗ ಮಾಲೀಕಯ್ಯ ಗುತ್ತೇದಾರ್ ಅವರ ಪ್ರಶ್ನೆ.